ಡುಪ್ಲಿಕೇಟ್ ಮನಿ ಆರ್ಡರ್‌ಗಳಿಗೆ ಮೊಬಲಗ್ ಪೂರ್ನ ಪಾವತಿ.

ಮನಿ ಆರ್ಡರ್ ಇಲಾಖಾ.

ತಾರೀಖು 1ನೇ ಆಗಸ್ಟು 1873, ಸರ್ಕ್ಯುಲರ್ ನಂಬರ್ 1028.

ಕಾಂಪ್ಟ್ರೋಲರ್ ಜನರಲ್‌ಯವರ ಆಫಿಸ್‌ನಿಂದ ಜಾಲತಿ ಯಿನವಿ ಜುಲೈ 2ನೇ ಮಕ್ಕುಂ 1335ನೇ ನಂಬರ್ ಕೊಟ್ಟ ಅಪ್ಪಣೆ ಅನುಸರಿಸಿ ಡಿಪ್ಟಿ ಆಕೌಂಟೆಂಟ್ ಜನರಲ್ ವ ಮನಿ ಆರ್ಡರ್ ಇಲಾಖಾ ಕಾಂಪ್ಟ್ರೋಲರ್‌ಯವರು ಪರಿಷ್ಕ ಮನಿ ಆರ್ಡರ್ ರೂಲ್‌ಸಿನ 45ನೇ ಕಲಂ ಕುರಿತು ಡಿಸ್ಟ್ರಿಕ್ಟು ಟ್ರೆಜರಿ ಆಫಿಸರ್‌ಗಳಿಗೆ ತಿಳಿಸುವದೇನಂದರೆ, ಯಾವ ಟ್ರೆಜರಿಂದ ವೈಂದು ಅರಿಜಿನಲ್ ಮನಿ ಆರ್ಡರ್ ಕೊಡಲ್ಪಟ್ಟಿತ್ತೋ ಅಂತಾ ಟ್ರೆಜರಿ ಆಫಿಸರರಿಗೆ ಆ ಬಾಬತು ಡುಪ್ಲಿಕೇಟ್ ಮನಿ ಆರ್ಡರ್ ಮೊಬಲಗ್ ವಾಪಸ್ ಕೊಡಿಸತಕ್ಕ ಬಗ್ಯೆ ಅರ್ಜಿ ಬರದುಕ್ಕೊಳ್ಳಲ್ಪಟ್ಟಲ್ಲಿ ಸದರೀ ಟ್ರೆಜರಿ ಆಫಿಸರರು ಯಾರ ಮೇಲೆ ಕೊಟ್ಟಿದ್ದರೋ ಅಂತಾ ಆಫಿಸರಿಗೆ ಅರಿಜನಲ್ ಆರ್ಡರಿಗೆ ಹಣ ಪಾವತಿ ಯಾಗದ ಸರ್ಟಿಫಿಕೇಟ್‌ಬಗ್ಯೆ ಬರದುಕ್ಕೊಳ್ಳತಕ್ಕದ್ದು. ಅರಿಜನಲ್ ವ ಡುಪ್ಲಿಕೇಟ್ ಆರ್ಡರ್‌ಗಳಿಗೆ ಸಹಾ ಹಣ ಪಾವತಿ ಮಾಡಿಸತಕ್ಕದ್ದಲ್ಲವೆಂತ ತಿಳಿಸತಕ್ಕದ್ದು. ಹೀಗೆ ಪಾವತಿ ಸರ್ಟಿಫಿಕೇಟ್ ತಲಪಿದ ಕೂಡ್ಲೆ ಈ ಆಫಿಸಿಗೆ ಮುಖ್ಯವಾಗಿ ತಿಳಿಸದೇನೇ ಟ್ರೆಜರಿ ಆಫಿಸರರು ಡುಪ್ಲಿಕೇಟ್ ಮನಿ ಆರ್ಡರ್ ಮೊಬಲಗ್ ವಾಪಸ್ ಮಾಡತಕ್ಕದ್ದು.

ವೊಂದು ಅರಿಜನಲ್ ಮನಿ ಆರ್ಡರನ್ನು ಕಳದುಕ್ಕೊಂಡು ಹಣ ಕಳಿಸಿಸುವವನು ಮೊಬಲಗ್ ವಾಪಸ್ ಪಾವತಿ ಖಾಯಿಷ್ ಮಾಡಿದರೆ ವೊಂದು ಡುಪ್ಲಿಕೇಟ್‌ಬಗ್ಯೂ ಮತ್ತು ಹಣ ವಾಪಸ್ ಆಗಲಿಕ್ಕೂ ಸಹಾ ಖಾಯಿಷ್ ಮಾಡತಕ್ಕದೆಂಗೆ ತಿಳಸತಕ್ಕದ್ದು. ವೊಂದು ಡುಪ್ಲಿಕೇಟ್ ಆರ್ಡರ್‌ಬಗ್ಯೆ ಮಾಡಿಕ್ಕೊಂಡ ಅರ್ಜಿ ಯನ್ನ ಅಂಗೀಕರಿಸತಕ್ಕದ್ದಕ್ಕೊಸ್ಕರ ಸಿಗೆವಾನಿಸುವದಕ್ಕೆ ಪೂರ್ವ ಆರ್ಡರ್ ಕೊಡುವ ಟ್ರೆಜರಿ ಆಫಿಸರರು ಹಣ ಪಾವತಿಯಾಗದ ಸರ್ಟಿಫಿಕೇಟ್ ಪಡದು ಆ ಆರ್ಡರಿಗೆ ಹಣ ಪಾವತಿಯಾಗದಂತೆ ನಿಲ್ಲಿಸತಕ್ಕದ್ದು.

ಡುಪ್ಲಿಕೇಟ್ ಆರ್ಡರಿಗಾಗಲಿ, ಅರಿಜನಲ್ ಆರ್ಡರಿಗಾಗಲಿ ಹಣ ವಾಪಸ್ ಆಗಬೇಕಾದ ದರೋಬಸ್ತು ಸಂಗತಿಗಳಿ ಟ್ರೆಜರಿ ಆಫಿಸರರಲ್ಲಿ ಹಣ ವಾಪಸ್ ಆಗುವದಕ್ಕೆ ಮೊದಲು, ಆರ್ಡರ್‌ಸ್ಸನ್ನೇ ಹಾಜರ್ಮಾಡತಕ್ಕದ್ದು.

ಈ ಸರ್ಕ್ಯುಲರಿನ ವೊಂದು ನಕಲ್ ಮನಿ ಆರ್ಡರ್ ರೂಲ್‌ಸ್ ಬುಕ್ಕಿನ 6ನೇ ಪೇಜಿನಲ್ಲಿ ವಿಲಾ ಯಿಡಲ್ಪಡತಕ್ಕದ್ದು.

ನಂ. 12. ತಾರೀಖು 1ನೇ ಆಗಸ್ಟು 1873.

ಕಲ್ಕತ್ತೆಯಲ್ಲಿ ಮನಿ ಆರ್ಡರ್ ಇಲಾಖೆ ಇನ್ ಚಾರ್ಜ್ ಆಸಿಸೆಂಟ್ ಕಾಂಪ್ಟ್ರೋಲರ್‌ಯವರಿಂದ ಬಂದ ಅಡ್ವೈಸ್ ಅ ಮೈಸೂರ್ ವ ಕೊಡಗು ಡಿಸ್ಟ್ರಿಕ್ಟು ಟ್ರೆಜರಿ ಆಫಿಸರ್‌ಗಳಿಗೆ ತಿಳಿಯಪಡಿಸುವದೇನಂದರೆ, ಮದರಾಸ್ ಪ್ರೊಸಿಡೆನ್ಸಿ ಕೋಯಿವ ರು ಡಿಸ್ಟ್ರಿಕ್ಟಿನಲ್ಲಿರುವ ಹಿರೋಡ್ ಯೆಂಬ ಸ್ಥಳದಲ್ಲಿ ವೊಂದು ಹೊಸ ಮನಿ ಆರ್ಡರ್ ಆಫಿಸ್ ತೆರೆಯಲ್ಪಟ್ಟಿರುತ್ತೆ.

H. HUDSON,
Controller, Money Order Off
Mysore

159

ಫಾರೆಸ್ಟ್ ಇಲಾಖಾ.

ತಾರೀಖು 28ನೇ ಜುಲೈ 1873.

ಇದರಿಂದ ತಿಳಿಯಪಡಿಸುವದೇನಂದರೆ, ಮೈಸೂರು ಫಾರೆಸ್ಟ್ ಇಲಾಖೆ ಬಾಬತು ಮೂರು ಮರಿ ಆನೆಗಳು ಸ್ಯ 18 ಇನವಿ ಸೆಪ್ಟಂಬರ್ ಗುರ್ಯೇ ತಾರೀಖಿನ ಮಧ್ಯಾನ್ಹ ಬೆಂಗಳೂರಲ್ಲಿರುವ ಸರಕಾರದ ವುಡ್‌ಯಾರ್ಡ್ ಯೆಂಬ ಮರದ ಕೋತಿಯ ರಾಜ್ ಮೂಲಕ ವಿಕ್ರಯಿಸಲ್ಪಡುತ್ತವೆ.

ಇವೆಲ್ಲಾ ಹೆಣ್ಣಾನೆಗಳು 6 ಅಡಿ 7 ಯಿಂಚ್‌ಗಳು, 6 ಅಡಿ 2 ಯಿಂಚ್‌ಗಳು, 5 ಅಡಿ ಯತ್ತರವಾದವು. ಈ ಪೈಕಿ ಆನೆಯು ಸವಾರಿಗೂ ಮತ್ತು ಹೊತ್ತುಕ್ಕೊಂಡು ಹೋಗತಕ್ಕ ಬಗ್ಯೆ ತರ್ಬಿಯತ್ತಾಗಿದೆ. ಯರಡನೇದು ತರ್ಬಿಯತ್ತಿ ಚಿಕ್ಕದು ಬಹಳ ಸಾಧು ಇನ್ನು ತರ್ಬಿಯತ್ತ್ ಆಗಿರುವದಿಲ್ಲವು.